# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1684 (1932) |
| ಉತ್ತರಿಸಬೇಕಾದ ದಿನಾಂಕ | 24.03.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ 3 ವರ್ಷಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಅನುಮೋದನೆಗೊಂಡ ಕಾಮಗಾರಿಗಳು ಯಾವುವು; ಪೂರ್ಣಗೊಂಡ ಕಾಮಗಾರಿಗಳು ಹಾಗೂ ಬಾಕಿ ಇರುವ ಕಾಮಗಾರಿಗಳೆಷ್ಟು; (ವಿವರ ನೀಡುವುದು) | ಕಳೆದ 3 ವರ್ಷಗಳಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |
| (ಆ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ವತಿಯಿಂದ ಕೈಗೊಂಡಿರುವ ಕಾಮಗಾರಿಗಳಾವುವು; ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆ ಆಗಿದೆ; ಖರ್ಚಾಗಿರುವ ಹಣ ಎಷ್ಟು (ವಿವರ ನೀಡುವುದು) | **<u>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್):</u>**<br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ ವತಿಯಿಂದ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ(ಕ್ವಿಮಿಪ್) ಜಲಸಿರಿ ಯೋಜನೆಯಡಿ ಎಡಿಬಿ ಮತ್ತು ಕೇಂದ್ರ ಪುರಸ್ಕೃತ ಅಮೃತ್ ಯೋಜನೆ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳ ವಿವರ ಈ ಕೆಳಗಿನಂತಿವೆ:-<br>• ಒಟ್ಟು ಕಾಮಗಾರಿಗಳು - 11 ಕಾಮಗಾರಿಗಳು<br>• ಒಟ್ಟು ಗುತ್ತಿಗೆ ಮೊತ್ತ - ರೂ.989.01 ಕೋಟಿ<br>• ಒಟ್ಟು ಬಿಡುಗಡೆಯಾದ ಮೊತ್ತ ರೂ.708.52 ಕೋಟಿ<br>• ಒಟ್ಟು ಖರ್ಚು - ರೂ.708.52 ಕೋಟಿ.<br>ಕ್ವಿಮಿಪ್ ಯೋಜನೆಯಲ್ಲಿ ಕಾಮಗಾರಿಗಳ ಪ್ರಗತಿಗೆ ಅನುಗುಣವಾಗಿ ಹಣ ಬಿಡುಗಡೆಯಾಗುತ್ತಿದೆ ಮತ್ತು ಅದರಂತೆ ವೆಚ್ಚ ಮಾಡಲಾಗುತ್ತಿದೆ.<br>ಕಾಮಗಾರಿಗಳ ವಿವರ, ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನ ಮತ್ತು ಖರ್ಚಾಗಿರುವ ಹಣದ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |

| | | |
|---|---|---|
| | | **ಜಲಶುದ್ಧಿ ಅಭಿಯಾನ(ಬಳಸಿದ ನೀರು ನಿರ್ವಹಣೆ):**<br>ಸರ್ಕಾರದ ಆದೇಶ ಸಂಖ್ಯೆ:ನಅಇ 5 ಸಿಎಸ್‌ಎಸ್ 2023, ದಿನಾಂಕ:19.07.2023 ರನ್ವಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ್ ಮಿಷನ್ (ನ)-2.೦ ಅಡಿ ಬಳಸಿದ ನೀರು ನಿರ್ವಹಣೆ (ಜಲಶುದ್ಧಿ ಮಿಷನ್) ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ.<br><br>ಮಂಗಳೂರು ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.<br><br>ಸದರಿ ಅನುದಾನದಲ್ಲಿ 8.20 ಕಿ.ಮೀ ಹಾನಿಗೊಳಗಾಗಿರುವ ಪೈಪ್ಲೈನ್ ದುರಸ್ಥಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚ್ಚನಾಡಿಯಲ್ಲಿ ಪ್ರಸ್ತುತ ಇರುವ 8.75 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು SBR Technologyಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ 20 ಎಂ.ಎಲ್.ಡಿ ASP Technology ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮಾಡಿ ಸದರಿ ವೆಟ್ ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವಂತಹ ಕಾಮಗಾರಿಗಳನ್ನು ಅಳವಡಿಸಿಕೊಂಡು, ಕಾಮಗಾರಿ ಪ್ರಾರಂಭವಾಗಿದ್ದು, ಒಳಚರಂಡಿ ಪೈಪ್‌ಗಳ ಸಂಗ್ರಹಣೆ ಪ್ರಗತಿಯಲ್ಲಿರುತ್ತದೆ.<br><br>ಎನ್.ಜಿ.ಟಿ ಅನುದಾನದಲ್ಲಿ ಒಟ್ಟಾರೆ ಯೋಜನೆಗೆ ಅನುದಾನ ಬಿಡುಗಡೆಯಾಗಲಿದ್ದು, ಕಾಮಗಾರಿವಾರು ಅನುದಾನವು ಬಿಡುಗಡೆಯಾಗುವುದಿಲ್ಲ. ಕಾಮಗಾರಿಯ ಪ್ರಗತಿಗನುಗುಣವಾಗಿ ಅನುದಾನವನ್ನು ವೆಚ್ಚ ಮಾಡಲಾಗುತ್ತಿದ್ದು, ಇದುವರೆಗೂ ರೂ.1.90 ಕೋಟಿಗಳು ವೆಚ್ಚವಾಗಿರುತ್ತದೆ. |

| | | |
|---|---|---|
| (ಇ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ವಾಣಿಜ್ಯ ಕಟ್ಟಡಗಳಿಗೆ ಕಟ್ಟಡ ನಿರ್ಮಾಣದ ಅನುಮತಿ ನೀಡಲಾಗಿದೆ? (ಸಂಪೂರ್ಣ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಣಿಜ್ಯ ಕಟ್ಟಡಗಳಿಗೆ ಕಟ್ಟಡ ನಿರ್ಮಾಣದ ಅನುಮತಿ ನೀಡಿದ ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |

ಸಂಖ್ಯೆ:ನಅಇ 54 ಯುಎಂಎಸ್ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು.

ಅನುಬಂಧ - 1

ಅನುಬಂಧ : 1 ಮಂಗಳೂರು ನಗರದಲ್ಲಿ ಕ್ವಿಮಿಪ್ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಒಳಚರಂಡಿ ಮತ್ತು ಕುಡಿಯುವ ನೀರು ಸರಬರಾಜು ಕಾಮಗಾರಿಗಳ ವಿವರಗಳು

11 ಕಾಮಗಾರಿಗಳನ್ನು ರೂ. 989.01 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ 708.52 ಕೋಟಿಗಳನ್ನು ವೆಚ್ಚಮಾಡಲಾಗಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| ಅ) ಒಳಚರಂಡಿ ಕಾಮಗಾರಿಗಳು | | | | | | |
| 1 | ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | 84.56 | ಪೈಪ್ ಲೈನ್-11 ಕಿ.ಮೀ | 100 | 84.50 | ಕಾಮಗಾರಿಯು ಪೂರ್ಣಗೊಂಡಿದೆ |
| 2 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | 22.40 | ಪೈಪ್ ಲೈನ್-13.92 ಕಿ.ಮೀ,<br>ಮೆಷಿನ್ ಹೋಲ್-512 ಸಂಖ್ಯೆ<br>ಇನ್ಸ್ಪೆಕ್ಷನ್ ಚೆಂಬರ್-34 ಸಂಖ್ಯೆ | 100 | 22.40 | ಕಾಮಗಾರಿಯು ಪೂರ್ಣಗೊಂಡಿದೆ |
| 3 | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 23.56 | ಪೈಪ್ ಲೈನ್-17.72 ಕಿ.ಮೀ,<br>ಮೆಷಿನ್ ಹೋಲ್ -659 ಸಂಖ್ಯೆ<br>ಇನ್ಸ್ಪೆಕ್ಷನ್ ಚೆಂಬರ್-296 ಸಂಖ್ಯೆ | 100 | 23.56 | ಕಾಮಗಾರಿಯು ಪೂರ್ಣಗೊಂಡಿದೆ |
| 4 | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 77.59 | ಪೈಪ್ ಲೈನ್-27.40 ಕಿ.ಮೀ,<br>ಮೆಷಿನ್ ಹೋಲ್ -1569 ಸಂಖ್ಯೆ<br>ರಿಟೇನಿಂಗ್ ವಾಲ್-2.93 ಕಿ.ಮೀ | 100 | 77.59 | ಕಾಮಗಾರಿಯು ಪೂರ್ಣಗೊಂಡಿದೆ |
| 5 | ಮಂಗಳೂರು ನಗರದ ವಲಯ 3 & 5 ರ uncovered area ದಲ್ಲಿ ಒಳಚರಂಡಿ ಕಾಮಗಾರಿ | 19.05 | ಪೈಪ್ ಲೈನ್-12.02 ಕಿ.ಮೀ,<br>ಮೆಷಿನ್ ಹೋಲ್ -505 ಸಂಖ್ಯೆ,<br>ಇನ್ಸ್ಪೆಕ್ಷನ್ ಚೆಂಬರ್-19 ಸಂಖ್ಯೆ | 100 | 18.24 | ಕಾಮಗಾರಿಯು ಪೂರ್ಣಗೊಂಡಿದೆ |
| 6 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4 &7) | 30.59 | ಪೈಪ್ ಲೈನ್-8.88 ಕಿ.ಮೀ,<br>ಮೆಷಿನ್ ಹೋಲ್ -350 ಸಂಖ್ಯೆ,<br>ಇನ್ಸ್ಪೆಕ್ಷನ್ ಚೆಂಬರ್-5 ಸಂಖ್ಯೆ<br>ವೆಟ್ ವೆಲ್-1 ಸಂಖ್ಯೆ | 80.20 | 23.35 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 7 | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) | 22.65 | ಪೈಪ್ ಲೈನ್-10.41ಕಿ.ಮೀ,<br>ಮೆಷಿನ್ ಹೋಲ್ -450 ಸಂಖ್ಯೆ, | 93 | 20.26 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| ಅ) ಒಳಚರಂಡಿ ಕಾಮಗಾರಿಗಳು | | | | | | |
| | | | ಇನ್ಸ್ಪೆಕ್ಷನ್ ಚೆಂಬರ್-7 ಸಂಖ್ಯೆ | | | |
| ៥ | ಮಂಗಳೂರು ನಗರದ ವಲಯ 5 ರ MSEZ R & R colony ದಲ್ಲಿ ಒಳಚರಂಡಿ ಕಾಮಗಾರಿ | 15.63 | ಪೈಪ್ ಲೈನ್-4.30 ಕಿ.ಮೀ.<br>ಮಷಿನ್ ಹೋಲ್ - 15 ಸಂಖ್ಯೆ,<br>ವೆಟ್ ವೆಲ್-3 ಸಂಖ್ಯೆ<br>1.5 MLD ತ್ಯಾಜ್ಯ ನೀರು ಸಂಸ್ಕರಣಾ ಘಟಕ | 100 | 9.68 | ಕಾಮಗಾರಿಯು ಪೂರ್ಣಗೊಂಡಿದೆ (ಪ್ರಾಯೋಗಿಕ ಕಾರ್ಯಾಚರಣೆ ಹಂತದಲ್ಲಿದೆ). |
| ಒಟ್ಟು (Incl. expenditure of Terminated works (14.88 Cr + 5.60 Cr)) | | 316.49 | | | 300.06 | |
| ಆ) ಕುಡಿಯುವ ನೀರು ಸರಬರಾಜು ಕಾಮಗಾರಿಗಳು | | | | | | |
| 1 | ಸಗಟು ನೀರು ಸರಬರಾಜು ಕಾಮಗಾರಿ | **35.29** | **WTP 20 MLD**<br>**ಪೈಪ್ ಲೈನ್-1.63 ಕಿ.ಮೀ** | **ಶೇ. 100** | **35.29** | |
| 2 | ನಿರಂತರ ನೀರು ಸರಬರಾಜು ಕಾಮಗಾರಿ | **617.22** | **ಪೈಪ್ ಲೈನ್-1205.81 ಕಿ.ಮೀ**<br>**ಜಲಸಂಗ್ರಹಗಾರ-24 ಸಂಖ್ಯೆ**<br>**ನಳ ಸಂಪರ್ಕ-96300 ಸಂಖ್ಯೆ**<br>**WTP-125 MLD** | **ಶೇ. 63.01** | **373.17** | |
| 3 | ಅಡ್ಯಾರ್ ಬಳಿ ಹೊಸ 125 ಎಂ.ಎಲ್.ಡಿ ಜಾಕ್ ವೆಲ್ ನಿರ್ಮಾಣ | **20.01** | **125 MLD ಜಾಕ್ ವೆಲ್ ನಿರ್ಮಾಣ** | **ಶೇ. 5** | **-** | |
| | ಒಟ್ಟು | **672.52** | | | **408.46** | |
| | ಒಟ್ಟು ಒಳಚರಂಡಿ ಹಾಗೂ ನೀರು ಸರಬರಾಜು ಕಾಮಗಾರಿಗಳು | **11** | | | | |

## ಅನುಬಂಧ - 2

| ಅ.ನಂ. | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆಯ ಹೆಸರು | ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿದ ಸಂಖ್ಯೆ |
|---|---|---|---|
| 1 | ದಕ್ಷಿಣ ಕನ್ನಡ ಜಿಲ್ಲೆ | ಬಂಟ್ವಾಳ ಪುರಸಭೆ | 16 |
| 2 | | ಬೆಳ್ತಂಗಡಿ ಪಟ್ಟಣ ಪಂಚಾಯತಿ | 05 |
| 3 | | ಮೂಡಬಿದರೆ ಪುರಸಭೆ | 17 |
| 4 | | ಮುಲ್ಕಿ ಪಟ್ಟಣ ಪಂಚಾಯತಿ | 04 |
| 5 | | ಪುತ್ತೂರು ನಗರಸಭೆ | 81 |
| 6 | | ಸುಳ್ಯ ಪಟ್ಟಣ ಪಂಚಾಯತಿ | 24 |
| 7 | | ಉಳ್ಳಾಲ ನಗರಸಭೆ | 09 |
| 8 | | ಕೋಟೆಗಾರ ಪಟ್ಟಣ ಪಂಚಾಯತಿ | 06 |
| 9 | | ವಿಟ್ಲ ಪಟ್ಟಣ ಪಂಚಾಯತಿ | 05 |
| 10 | | ಸೋಮೇಶ್ವರ ಪುರಸಭೆ | 07 |
| 11 | | ಕಡಬ ಪಟ್ಟಣ ಪಂಚಾಯತಿ | 01 |
| 12 | | ಬಜಪೆ ಪಟ್ಟಣ ಪಂಚಾಯತಿ | 14 |
| 13 | | ಕಿನ್ನಿಗೋಳಿ ಪಟ್ಟ ಪಂಚಾಯತಿ | 25 |
| 14 | | ಮಂಗಳೂರು ಮಹಾನಗರ ಪಾಲಿಕೆ | 139 |
| | | ಒಟ್ಟು: | **353** |

ಸಹಾಯಕ ನಿರ್ದೇಶಕರು (ಅಭಿವೃದ್ಧಿ)
**ಪೌರಾಡಳಿತ ನಿರ್ದೇಶನಾಲಯ**
**ಬೆಂಗಳೂರು**